

ವಯಸ್ಸು ನಲವತ್ತೈದಾದ್ರೂ ಹರೀಶ್ ಇನ್ನೂ ಎಲಿಜಿಬಲ್ ಬ್ಯಾಚ್ಯುಲರ್. ಅಮೆರಿಕದ ಮುಳುಗುತ್ತಿದ್ದ ಹಡಗಿನಂತಾಗಿದ್ದ ಒಂದು ಕಂಪನಿಯಲ್ಲಿ ಸಿಇಓ ಪಟ್ಟ ಸಿಕ್ಕಿತ್ತು. ತಾಯ್ನಾಡನ್ನು ಬಿಟ್ಟು ಹೋಗುವಾಗ ಆಗುವ ಎಲ್ಲಾ ಭಾವೋದ್ವೇಗಗಳು ಆತನಿಗೆ ಶುರುವಾಗಿದ್ದವು.

ದೇಶ ಬಿಟ್ಟು ಹೋಗುವ ಮೊದಲು ಹುಟ್ಟೂರಾದ ಮಂಗಳೂರಿಗೆ ಒಮ್ಮೆ ಹೋಗಿ, ಕಡಲ ತೀರದ ತಂಗಾಳಿ, ಮಚಲಿ, ಗಿರಿಮಂಜ ಹೋಟೆಲಿನ ಆ ಕಾಣೆ, ಮಾಂಜಿಯ ರುಚಿ ಅನುಭವಿಸಿ, ನೆನಪಿನ ಬುತ್ತಿಯನ್ನು ಕಟ್ಟಿಕೊಂಡು ಅಮೆರಿಕಕ್ಕೆ ಹಾರಲು ನಿರ್ಧರಿಸಿದ.

ತನ್ನ ಶೋಭಾ ಅಪಾರ್ಟ್‌ಮೆಂಟ್‌ನ ಹತ್ತಿರವಿದ್ದ ಪರಮೇಶ್ವರಿ ದೇವಸ್ಥಾನದ ಮೂಲಕ ಕಾಲ್ನಡಿಗೆಯಲ್ಲಿ ರೈಲ್ವೇ ಸ್ಟೇಷನ್ನಿಗೆ 15 ನಿಮಿಷದ ದಾರಿ. ಆಟೋದಲ್ಲಿ ಸುತ್ತಿ ಬಳಸಿ ಹೋಗಲು ಅರ್ಧ ಗಂಟೆ ಬೇಕು. ರಾತ್ರಿ 9ಕ್ಕೆ ರೈಲು ಇದ್ದುದರಿಂದ ಮುಕ್ಕಾಲು ಗಂಟೆ ಮುಂಚಿತವಾಗಿ ಲಗೇಜಿನೊಂದಿಗೆ ಮನೆಯಿಂದಾಚೆ ಹೆಜ್ಜೆ ಇಡುವ ವೇಳೆಗೆ, ಗುಡುಗು ಸಿಡಿಲಿನ ಅಬ್ಬರ. ಆಕಾಶದತ್ತ ಒಮ್ಮೆ ದಿಟ್ಟಿಸಿದರೆ, ದಟ್ಟ ಕಾರ್ಮೋಡ, ಆಕಾಶವೇ ತೂತಾದ ರೀತಿಯಲ್ಲಿ ಧೋ ಎಂದು ಮಳೆ ಸುರಿಯುತ್ತಿದೆ. ಕೊಡೆ ತೆಗೆದರೆ ಅದೂ ತೂರಿ ಹೋಗುವಷ್ಟು ರಭಸದ ಗಾಳಿ. ನಡೆದುಕೊಂಡು ಸ್ಟೇಷನ್ ಸೇರುವುದು ಅಸಾಧ್ಯ. 15 ನಿಮಿಷ ಕಾದ ಹರೀಶ್‌ಗೆ ಆಟೊ ಕೂಡಾ ಸಿಗಲಿಲ್ಲ. ಅದೇ ಸಮಯಕ್ಕೆ ಅಪಾರ್ಟ್‌ಮೆಂಟಿನಿಂದ ಹೊರಗೆ ಹೊರಟ ಪರಿಚಯದವರ ಕಾರಿನಿಂದಾಗಿ ಸರಿಯಾದ ಸಮಯಕ್ಕೆ ಹರೀಶ್ ಪ್ಲಾಟ್‌ಫಾರ್ಮ್ ತಲುಪುವಂತಾದರೂ ರೈಲು ಅದಾಗಲೇ ಬಿಟ್ಟಾಗಿತ್ತು. ರೈಲಿನ ವೇಗ ಕಡಿಮೆ ಇದ್ದುದರಿಂದ ಕೊನೆ ಬೋಗಿಯನ್ನಾದ್ರೂ ಹತ್ತಿ ಬಿಡೋಣ ಅಂತ ಓಡಿದ ಹರೀಶ್‌ಗೆ ಬಾಗಿಲ ಬಳಿ ಮಹಿಳೆಯೊಬ್ಬಳು ಕೊರಳಿಗೊಂದು ಬ್ಯಾಗ್, ಕೈಯಲ್ಲೆರಡು ಲಗೇಜಿನೊಂದಿಗೆ ರೈಲನ್ನು ಹತ್ತಲು ಪ್ರಯತ್ನಿಸುತ್ತಿದ್ದಳು. ಆಕೆ ಹತ್ತದೆ ಹರೀಶ್‌ಗೆ ಹತ್ತಲಾಗದು. ಆಕೆ ಏನು ಅಂದುಕೊಂಡರೂ ಪರವಾಗಿಲ್ಲವೆಂದು ತಕ್ಷಣ ಆಕೆಯ ಕಂಕುಳಿಗೆ ಕೈ ಹಾಕಿದ. ಅವಳು ಹಿಂತಿರುಗಿ ''ರಾಸ್ಕಲ್'' ಅನ್ನುವಷ್ಟರಲ್ಲಿ ಆಕೆಯನ್ನು ಎತ್ತಿ ರೈಲೊಳಗೆ ತಳ್ಳಿಯೂ ಆಗಿತ್ತು. ತಾನೂ ಹತ್ತಿ ''ಉಸ್ಸಪ್ಪ'' ಅಂತ ನಿಟ್ಟುಸಿರು ಬಿಟ್ಟ.